


بسم اللهِ الرّحمٰنِ الرّحيم

# ಮಕ್ಕಾ ವಿಜಯ: ಯುದ್ಧರಹಿತ ಪ್ರವೇಶ ಹಾಗೂ ಕರುಣೆ ಮತ್ತು ಕ್ಷಮೆಯ ಅದ್ಭುತ ವಿಜಯಗಾಥೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **27–06–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ) ಸೈನ್ಯದೊಂದಿಗೆ ಮಕ್ಕಾದ ಸಮೀಪಕ್ಕೆ ಮೌನವಾಗಿ ತಲುಪಿದ್ದು ಮತ್ತು ಅಲ್ಲಿ ಬೀಡುಬಿಟ್ಟಿದ್ದರ ಕುರಿತು ಪ್ರಸ್ತಾಪಿಸಲಾಗುತ್ತಿತ್ತು. ಹಝ್ರತ್ ಪೈಗಂಬರ್(ಸ) ಹತ್ತು ಸಾವಿರ ಸ್ಥಳಗಳಲ್ಲಿ ಬೆಂಕಿ ಹೊತ್ತಿಸಿದರು. ಅಬೂ ಸುಫಿಯಾನ್ ಮತ್ತು ಅವರ ಸಂಗಡಿಗರು ಇದನ್ನು ನೋಡಿ ತೀವ್ರವಾಗಿ ಗಾಬರಿಗೊಂಡರು. ಇದರ ಕೆಲವು ವಿವರಗಳನ್ನು ಮೊದಲೇ ಹೇಳಲಾಗಿತ್ತು, ಅದರ ಬಗ್ಗೆ ಇನ್ನಷ್ಟು ವಿವರಿಸುತ್ತೇನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದೆಡೆ ಹೀಗೆ ವಿವರಿಸುತ್ತಾರೆ: ಹಝ್ರತ್ ಅಬ್ಬಾಸ್(ರ) ಅಬೂ ಸುಫಿಯಾನ್‌ರ ಹಳೆಯ ಸ್ನೇಹಿತರಾಗಿದ್ದರಿಂದ, ಅವರು ಅಬೂ ಸುಫಿಯಾನ್‌ರನ್ನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಕರೆದುಕೊಂಡು ಹೋಗಲು ಸಿದ್ಧಪಡಿಸಿದರು ಮತ್ತು ತಮ್ಮೊಂದಿಗೆ ಒಂಟೆಯ ಮೇಲೆ ಕುಳ್ಳಿರಿಸಿಕೊಂಡು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ತಲುಪಿಸಿದರು. ಅಬೂ ಸುಫಿಯಾನ್ ಹಝ್ರತ್ ಪೈಗಂಬರ್(ಸ)ರ ಹತ್ತಿರ ತಲುಪಿದಾಗ, ಇಸ್ಲಾಮಿನ ಸೈನ್ಯದ ವೈಭವ ಮತ್ತು ಶಿಸ್ತನ್ನು ನೋಡಿ ಆಶ್ಚರ್ಯ ಮತ್ತು ಭಯದಿಂದ ಮುಳುಗಿದರು. ಅವರ ಹೃದಯದಲ್ಲಿ ದೊಡ್ಡ ಬದಲಾವಣೆ ಉಂಟಾಗಿತ್ತು, ಏಕೆಂದರೆ ಅವರು ಏಳು ವರ್ಷಗಳ ಹಿಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತಿದ್ದರು, ಆಗ ಹಝ್ರತ್ ಪೈಗಂಬರ್(ಸ)ರನ್ನು ಮಕ್ಕಾದಿಂದ ಹೊರಹಾಕಲಾಗಿತ್ತು. ಇಂದು ಅದೇ ಹಝ್ರತ್ ಪೈಗಂಬರ್(ಸ) ಹತ್ತು ಸಾವಿರ ಸೈನಿಕರೊಂದಿಗೆ ಯಾವುದೇ ದೌರ್ಜನ್ಯವಿಲ್ಲದೆ ಹಿಂತಿರುಗಿದ್ದರು. ಹಝ್ರತ್ ಪೈಗಂಬರ್(ಸ) ಅಬೂ ಸುಫಿಯಾನ್‌ರ ಸ್ಥಿತಿಯನ್ನು ನೋಡಿ, ಅವರು ಸ್ವತಃ ಪರಿಸ್ಥಿತಿಯನ್ನು ಕಂಡು ಮನವರಿಕೆ ಮಾಡಿಕೊಳ್ಳಲಿಕ್ಕಾಗಿ ಅವರನ್ನು ಆ ರಾತ್ರಿ ಹಝ್ರತ್ ಅಬ್ಬಾಸ್‌ರೊಂದಿಗೆ ಇರಲು ಬಿಡಲಾಯಿತು.

ಫಜರ್ ಸಮಯವಾದಾಗ, ಮುಸ್ಲಿಮರು ವುಝೂ ಮಾಡುತ್ತಿರುವುದನ್ನು ಮತ್ತು ಸಾಲಾಗಿ ನಿಂತು ನಮಾಝ್ ಮಾಡುತ್ತಿರುವುದನ್ನು ಅಬೂ ಸುಫಿಯಾನ್ ನೋಡಿದರು. ಇದು ಅವರಿಗಾಗಿ ಸಿದ್ಧಪಡಿಸಲಾಗುತ್ತಿರುವ ಯಾವುದೋ ಒಂದು ಹೊಸ ಶಿಕ್ಷೆಯಾಗಿರಬಹುದು ಎಂದು ಭಾವಿಸಿ ಅವರು ಗಾಬರಿಗೊಂಡರು. "ಇದು ನಮಾಝ್ ಆಗಿದೆ" ಎಂದು ಹಝ್ರತ್ ಅಬ್ಬಾಸ್ ಅವರೊಡನೆ ಹೇಳಿದರು. ನಮಾಝ್ ಸಮಯದಲ್ಲಿ ಸಾವಿರಾರು ಮುಸ್ಲಿಮರು ಹಝ್ರತ್ ಪೈಗಂಬರ್(ಸ)ರ ಹಿಂದೆ ರುಕೂಅ್ ಮತ್ತು ಸಜ್ದ ಮಾಡುತ್ತಿರುವುದನ್ನು ನೋಡಿದಾಗ ಅಬೂ ಸುಫಿಯಾನ್ ಹಝ್ರತ್ ಅಬ್ಬಾಸ್(ರ)ರೊಡನೆ ಹೀಗೆ ಹೇಳಿದರು: "ನಾನು ಕಿಸ್ರಾ (ಪರ್ಶಿಯನ್ ಸಾಮ್ರಾಟ) ಮತ್ತು ಕೈಸರ್‌ನ (ರೋಮನ್ ಸಾಮ್ರಾಟ) ದರ್ಬಾರುಗಳನ್ನು ನೋಡಿದ್ದೇನೆ, ಆದರೆ ಮುಹಮ್ಮದ್(ಸ)ರೊಂದಿಗೆ ಇರುವಂತಹ ನಿಷ್ಠಾವಂತ ಸಮುದಾಯವನ್ನು ನಾನು ಎಲ್ಲಿಯೂ ನೋಡಿಲ್ಲ". ಹಝ್ರತ್ ಅಬ್ಬಾಸ್ ಹೇಳಿದರು: "ಈಗಲಾದರೂ ನೀವು ಹಝ್ರತ್ ಪೈಗಂಬರ್(ಸ)ರಿಂದ ಕ್ಷಮೆ ಮತ್ತು ಮನ್ನಣೆಯನ್ನು ಕೇಳಿಕೊಳ್ಳುವುದು ಉತ್ತಮ."

ನಮಾಝ್ ಮುಗಿದಾಗ, ಹಝ್ರತ್ ಅಬ್ಬಾಸ್(ರ) ಅಬೂ ಸುಫಿಯಾನ್‌ರನ್ನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಕರೆದುಕೊಂಡು ಹೋದರು. ಹಝ್ರತ್ ಪೈಗಂಬರ್(ಸ) ಅಬೂ ಸುಫಿಯಾನ್‌ರೊಡನೆ ತೌಹೀದ್ (ಏಕದೇವವಿಶ್ವಾಸ) ಮತ್ತು ರಿಸಾಲತ್ (ಪ್ರವಾದಿತ್ವ) ಮೇಲಿನ ನಂಬಿಕೆಯ ಬಗ್ಗೆ ಪ್ರಶ್ನಿಸಿದರು. ಅಬೂ ಸುಫಿಯಾನ್ ತೌಹೀದನ್ನು ಒಪ್ಪಿಕೊಂಡರು, ಆದರೆ ರಿಸಾಲತ್ ಬಗ್ಗೆ ಸ್ವಲ್ಪ ಹಿಂಜರಿಕೆ ತೋರಿಸಿದರು. ಆದರೆ ಅವರ ಸಂಗಡಿಗರಾದ ಹಕೀಮ್ ಬಿನ್ ಹಿಝಾಮ್ ಮತ್ತು ಇನ್ನೊಬ್ಬ ವ್ಯಕ್ತಿ ಮುಸ್ಲಿಮರಾದರು. ಅನಂತರ ಅಬೂ ಸುಫಿಯಾನ್ ಕೂಡ ಇಸ್ಲಾಮನ್ನು ಸ್ವೀಕರಿಸಿದರು, ಆದರೆ ಅವರ ಹೃದಯವು ಸಂಪೂರ್ಣವಾಗಿ ತೆರೆದುಕೊಂಡದ್ದು ಮಕ್ಕಾ ವಿಜಯದ ನಂತರವೇ ಆಗಿತ್ತು.

ಹಕೀಮ್ ಬಿನ್ ಹಿಝಾಮ್ ಹಝ್ರತ್ ಪೈಗಂಬರ್(ಸ)ರನ್ನು ಕೇಳಿದರು: "ಈ ಸೈನ್ಯವು ತಮ್ಮದೇ ಜನರನ್ನು ನಾಶಮಾಡಲು ಬಂದಿದೆಯೇ?" ಹಝ್ರತ್ ಪೈಗಂಬರ್(ಸ) ಹೀಗೆ ವಿವರಿಸಿದರು: "ಮಕ್ಕಾದವರು ದೌರ್ಜನ್ಯ ಮತ್ತು ವಂಚನೆ ಮಾಡಿದ್ದರು, ಹರಮ್‌ನಲ್ಲಿ ರಕ್ತಪಾತ ಮಾಡಿದ್ದರು, ಆದ್ದರಿಂದ ಈ ಕ್ರಮ ಅನಿವಾರ್ಯವಾಗಿತ್ತು." ಆದರೂ ಹಝ್ರತ್ ಪೈಗಂಬರ್(ಸ) ಹೀಗೆ ಸ್ಪಷ್ಟಪಡಿಸಿದರು: "ಯಾರು ಖಡ್ಗ ಎತ್ತುವುದಿಲ್ಲವೋ ಅಥವಾ ಮನೆಗಳಲ್ಲಿ ಸುರಕ್ಷಿತವಾಗಿರುವರೋ ಅಥವಾ ಅಬೂ ಸುಫಿಯಾನ್, ಹಕೀಮ್ ಬಿನ್ ಹಿಝಾಮ್ ಅಥವಾ ಮಸ್ಜಿದ್ ಹರಾಮ್‌ನಲ್ಲಿ ಆಶ್ರಯ ಪಡೆಯುವರೋ, ಅವರಿಗೆ ರಕ್ಷಣೆ ನೀಡಲಾಗುವುದು."

ಅಬೂ ಸುಫಿಯಾನ್‌ರ ಇಸ್ಲಾಂ ಇನ್ನೂ ದುರ್ಬಲವಾಗಿದೆ ಎಂದು ಹಝ್ರತ್ ಅಬ್ಬಾಸ್(ರ) ಆತಂಕ ವ್ಯಕ್ತಪಡಿಸಿದರು. ಅವರು ಇಸ್ಲಾಮಿನ ಸೈನ್ಯವನ್ನು ತನ್ನ ಕಣ್ಣುಗಳಿಂದ ನೋಡಲಿಕ್ಕಾಗಿ ಅವರನ್ನು ತಡೆಹಿಡಿಯಬೇಕು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಆದ್ದರಿಂದ, ಹಝ್ರತ್ ಅಬ್ಬಾಸ್(ರ) ಅಬೂ ಸುಫಿಯಾನ್‌ರನ್ನು ಒಂದು ಕಣಿವೆಯಲ್ಲಿ ತಡೆಹಿಡಿದರು, ಅಲ್ಲಿಂದ ಗೋತ್ರಗಳ ಸೈನ್ಯಗಳು ಹಾದುಹೋಗಲು ತೊಡಗಿದುವು. ಇಸ್ಲಾಮಿನ ಸೈನ್ಯದ ಭವ್ಯ ಶಕ್ತಿಯನ್ನು ಅಬೂ ಸುಫಿಯಾನ್ ನೋಡಿದರು. ಅನ್ಸಾರರ ದಳದ

ಮುಖ್ಯಸ್ಥ ಹಝ್ರತ್ ಸಅದ್ ಬಿನ್ ಉಬಾದ ಆವೇಶದಿಂದ ಹೀಗೆ ಹೇಳಿದರು: "ಇಂದು ಯುದ್ಧದ ದಿನ, ಇಂದು ಕಅಬಾದ ಪಾವಿತ್ರ್ಯ ಉಳಿಯದು." ಆಗ "ಇದು ವಿನಾಶದ ದಿನವಾಗಿರಬಹುದು" ಎಂದು ಅಬೂ ಸುಫಿಯಾನ್ ಪ್ರತಿಕ್ರಿಯಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಸ್ವತಃ ಒಂದು ಸೈನ್ಯದೊಂದಿಗೆ ಬಂದರು, ಅದರ ಧ್ವಜ ಹಝ್ರತ್ ಝುಬೈರ್ ಬಿನ್ ಅಲ್–ಅವ್ವಾಮ್‌ರ ಬಳಿ ಇತ್ತು.

ಮತ್ತೊಂದು ವರದಿಯ ಪ್ರಕಾರ, ಹಝ್ರತ್ ಪೈಗಂಬರ್(ಸ) ಅಬೂ ಸುಫಿಯಾನ್‌ರ ಬಳಿ ಹಾದುಹೋದಾಗ, ಅವರು ಹೇಳಿದರು: "ಯಾ ರಸೂಲಲ್ಲಾಹ್! ನೀವು ನಿಮ್ಮ ಸ್ವಂತ ಜನರ ಹತ್ಯಾಕಾಂಡಕ್ಕೆ ಆದೇಶ ನೀಡಿದ್ದೀರಾ? ಸಅದ್ ಬಿನ್ ಉಬಾದ ಹಾಗೆ ಹೇಳುತ್ತಿದ್ದರು ಎಂದು ನಿಮಗೆ ಗೊತ್ತಿಲ್ಲವೇ? ನಿಮ್ಮ ಜನರ ವಿಷಯದಲ್ಲಿ ನಾನು ಅಲ್ಲಾಹನ ಪರವಾಗಿ ನಿಮ್ಮೊಡನೆ ವಿನಂತಿಸುತ್ತೇನೆ. ನೀವು ಎಲ್ಲ ಜನರಿಗಿಂತ ಹೆಚ್ಚು ಪರಿಶುದ್ಧರು, ಸಂಬಂಧಗಳನ್ನು ಕಾಪಾಡುವವರು ಮತ್ತು ದಯೆಯುಳ್ಳವರು ಆಗಿರುವಿರಿ." ಹಝ್ರತ್ ಪೈಗಂಬರ್(ಸ) ಹೇಳಿದರು: "ಸಅದ್ ತಪ್ಪು ಹೇಳಿದ್ದಾರೆ! ಇಂದಿನ ದಿನವು ಕಾರುಣ್ಯದ ದಿನವಾಗಿದೆ. ಇಂದು ಅಲ್ಲಾಹನು ಕಅಬಗೆ ಮಹತ್ವವನ್ನು ನೀಡುವನು ಮತ್ತು ಅಲ್ಲಾಹನು ಖುರೈಶಿಯರಿಗೆ ನಿಜವಾದ ಗೌರವವನ್ನು ನೀಡುವನು." ಹಝ್ರತ್ ಪೈಗಂಬರ್(ಸ) ಹಝ್ರತ್ ಸಅದ್‌ಗೆ ಸಂದೇಶ ಕಳುಹಿಸಿ, ಅವರಿಂದ ಧ್ವಜವನ್ನು ತೆಗೆದುಕೊಂಡು ಅವರ ಪುತ್ರ ಹಝ್ರತ್ ಖೈಸ್(ರ)ರಿಗೆ ಅದನ್ನು ನೀಡಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಇದರ ಬಗ್ಗೆ ಹೀಗೆ ವಿವರಿಸುತ್ತಾರೆ: ಹೀಗೆ ಹಝ್ರತ್ ಪೈಗಂಬರ್(ಸ) ಮಕ್ಕಾದವರ ಮನವೊಲಿಸಿಕೊಂಡರು ಮತ್ತು ಅನ್ಸಾರರ ಮನಸ್ಸು ನೋಯುವುದನ್ನೂ ತಪ್ಪಿಸಿಕೊಂಡರು. ಹಝ್ರತ್ ಪೈಗಂಬರ್(ಸ)ರಿಗೆ ಹಝ್ರತ್ ಖೈಸ್‌ರ ಮೇಲೆ ಸಂಪೂರ್ಣ ಭರವಸೆ ಸಹ ಇತ್ತು, ಏಕೆಂದರೆ ಹಝ್ರತ್ ಖೈಸ್ ಅತ್ಯಂತ ಸಭ್ಯ ಸ್ವಭಾವದ ಯುವಕ ಆಗಿದ್ದರು. ಇಬ್ನ್ ಅಬೀ ಶೈಬ ವರದಿ ಮಾಡುತ್ತಾರೆ – ಹಝ್ರತ್ ಅಬ್ಬಾಸ್(ರ) ಹೇಳಿದರು: "ಯಾ ರಸೂಲುಲ್ಲಾಹ್, ನೀವು ನನಗೆ ಅನುಮತಿ ನೀಡಿದರೆ, ನಾನು ಮಕ್ಕಾದ ಜನರ ಬಳಿ ಹೋಗಿ ಅವರಿಗೆ ಆಹ್ವಾನ ನೀಡುತ್ತೇನೆ ಮತ್ತು ನೀವು ಅವರಿಗೆ ಸುರಕ್ಷತೆಯನ್ನು ನೀಡಿರಿ."

ಹಾಗೆ ಅವರು ಹಝ್ರತ್ ಪೈಗಂಬರ್(ಸ)ರ ಶಹಬಾ ಎಂಬ ಹೆಸರಿನ ಬಿಳಿ ಹೇಸರಗತ್ತೆಯ ಮೇಲೆ ಸವಾರಿ ಮಾಡಿ ಹೊರಟರು. ಅವರು ಮಕ್ಕಾಕ್ಕೆ ಪ್ರವೇಶಿಸಿ ಹೀಗೆ ಘೋಷಿಸಿದರು: "ಎಲೈ ಮಕ್ಕಾ ನಿವಾಸಿಗಳೇ, ಇಸ್ಲಾಂ ಸ್ವೀಕರಿಸಿದರೆ ನೀವು ರಕ್ಷಿಸಲ್ಪಡುವಿರಿ. ನಿಮ್ಮಿಂದ ಎದುರಿಸಲು ಸಾಧ್ಯವಿಲ್ಲದಷ್ಟು ದೊಡ್ಡ ಸೈನ್ಯ ನಿಮ್ಮ ಬಳಿ ಬಂದಿದೆ."

ಹಝ್ರತ್ ಮುಸ್ಲಿಹ್ ಮೌಊದ್(ರ) ವಿವರಿಸುತ್ತಾರೆ: ಅಬೂ ಸುಫಿಯಾನ್ 'ತಾನು ಮಕ್ಕಾದ ಜನರಿಗೆ ರಕ್ಷಣೆಯ ಮಾರ್ಗವನ್ನು ಕಂಡುಕೊಂಡಿದ್ದೇನೆ' ಎಂದು ಸಂತೋಷಪಡುತ್ತಿದ್ದರು. ಆದರೆ ಇಸ್ಲಾಮಿನ ಆರಂಭದಿಂದಲೂ ಮುಸ್ಲಿಮರ ಬಗ್ಗೆ ಹಗೆ ಮತ್ತು ಅಸೂಯೆಯನ್ನು ಇರಿಸಲು ಜನರಿಗೆ ಕಲಿಸುತ್ತಾ ಬಂದಿದ್ದ, ಕಾಫಿರ್ ಆಗಿದ್ದರೂ ಕೂಡ ಒಬ್ಬ ಧೈರ್ಯಶಾಲಿ ಮಹಿಳೆಯಾಗಿದ್ದ ಅವರ ಪತ್ನಿ **ಹಿಂದ** ಮುಂದೆ ಬಂದು ತನ್ನ ಪತಿಯ ಗಡ್ಡವನ್ನು ಹಿಡಿದು ಮಕ್ಕಾದ ಜನರನ್ನು ಕರೆದು ಹೀಗೆ ಕೂಗಿದಳು: 'ಬನ್ನಿರಿ ಮತ್ತು ಈ ಮುದುಕ ಮೂರ್ಖನನ್ನು ಕೊಲ್ಲಿರಿ! ಹೋಗಿ ನಿಮ್ಮ ಜೀವಗಳಿಗಾಗಿ ಮತ್ತು ಪಟ್ಟಣದ ಗೌರವಕ್ಕಾಗಿ ಹೋರಾಡಿ ಸಾಯಿರಿ ಎಂದು ನಿಮಗೆ ಸಲಹೆ ನೀಡುವ ಬದಲು, ಇವನು ನಿಮಗೆ ಸಂರಕ್ಷಣೆ ನೀಡುವುದಾಗಿ ಘೋಷಿಸುತ್ತಿದ್ದಾನೆ.' ಅವಳ ಕೃತ್ಯವನ್ನು ನೋಡಿ ಅಬೂ ಸುಫಿಯಾನ್ ಹೇಳಿದರು: 'ಮೂರ್ಖಳೇ! ಇದು ಇಂತಹ ಮಾತುಗಳ ಸಮಯವಲ್ಲ, ಹೋಗಿ ನಿನ್ನ ಮನೆಯಲ್ಲಿ ಅಡಗಿರು. ನಾನು ಒಂದು ಸೈನ್ಯವನ್ನು ನೋಡಿ ಬಂದಿದ್ದೇನೆ, ಆ ಸೈನ್ಯದೊಂದಿಗೆ ಹೋರಾಡುವ ಶಕ್ತಿ ಇಡೀ ಅರೇಬಿಯಾಗೆ ಇಲ್ಲ.'

ಇಸ್ಲಾಮಿನ ಸೇನೆಯ ಮಕ್ಕಾ ಪ್ರವೇಶನದ ಘಟನೆಯನ್ನು ಬುಖಾರಿಯಲ್ಲಿ ಹೀಗೆ ಬರೆಯಲಾಗಿದೆ – ಹಝ್ರತ್ ಉರ್‌ವರಿಂದ ಹೀಗೆ ವರದಿಯಾಗಿದೆ: ಮಕ್ಕಾದ ಮೇಲ್ಭಾಗವಾದ ಕದಾ ಮೂಲಕ ಪ್ರವೇಶಿಸಲು, ತಮ್ಮ ಧ್ವಜವನ್ನು ಹುಜೂನ್‌ನಲ್ಲಿ ಇರಿಸಲು ಮತ್ತು ಹಝ್ರತ್ ಪೈಗಂಬರ್(ಸ) ಬರುವ ವರೆಗೂ ಆ ಸ್ಥಳವನ್ನು ಬಿಡದೇ ಇರಲು ಹಝ್ರತ್ ಪೈಗಂಬರ್(ಸ) ಹಝ್ರತ್ ಝುಬೈರ್(ರ)ರಿಗೆ ಆದೇಶಿಸಿದರು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಸೈನ್ಯದ ಬಲ ಭಾಗದ ಮುಖ್ಯಸ್ಥರಾಗಿದ್ದರು. ಅವರ ದಳದಲ್ಲಿ ಅಸ್ಲಮ್, ಸುಲೈಮ್, ಗಫಾರ್, ಮುಝೈನ ಮತ್ತು ಜುಹೈನ ಗೋತ್ರಗಳು ಇದ್ದವು. ಮಕ್ಕಾದ ತಗ್ಗು ಪ್ರದೇಶದಿಂದ ಪ್ರವೇಶಿಸಲು ಅವರೊಡನೆ ಹಝ್ರತ್ ಪೈಗಂಬರ್(ಸ) ಆದೇಶಿಸಿದರು. ಹತ್ತಿರದ ಮನೆಗಳ ಬಳಿ ಧ್ವಜ ಇರಿಸಲು ಹಝ್ರತ್ ಪೈಗಂಬರ್(ಸ) ಆದೇಶಿಸಿದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂ ಉಬೈದ ಬಿನ್ ಅಲ್–ಜರ್ರಾಹ್‌ರನ್ನು ಪದಾತಿ ದಳದಲ್ಲಿ ನೇಮಿಸಿದರು. ಯುದ್ಧದಿಂದ ತಮ್ಮ ಕೈಗಳನ್ನು ತಡೆಹಿಡಿಯಲು ಹಾಗೂ ಕೇವಲ ಅವರ ವಿರುದ್ಧ ಹೋರಾಡುವವರೊಂದಿಗೆ ಮಾತ್ರ ಹೋರಾಡಬೇಕು ಎಂದು ಹಝ್ರತ್ ಪೈಗಂಬರ್(ಸ) ಅಧಿಕಾರಿಗಳಿಗೆ ಆದೇಶ ನೀಡಿದ್ದರು.

ಹಝ್ರತ್ ಪೈಗಂಬರ್(ಸ) ಮಕ್ಕಾ ಪ್ರವೇಶಿಸಲು ಸಿದ್ಧರಾದಾಗ, ಮಕ್ಕಾದ ಕೆಲವು ಪ್ರಮುಖ ಮುಖಂಡರಾದ ಸಫ್ವಾನ್, ಇಕ್ರಿಮ ಮತ್ತು ಸುಹೈಲ್ ಎಂಬೀವರು ಮುಸ್ಲಿಮರ ವಿರುದ್ಧ ಯುದ್ಧ ಮಾಡಲು ಸಿದ್ಧತೆ ನಡೆಸಿದರು ಮತ್ತು ಖಂದಮ ಎಂಬ ಸ್ಥಳದಲ್ಲಿ ಖುರೈಶ್, ಬನೂ ಬಕರ್ ಮತ್ತು ಹುಝೈಲ್ ಗೋತ್ರಗಳ ಜನರನ್ನು ಒಟ್ಟುಗೂಡಿಸಿದರು. ಮುಹಮ್ಮದ್(ಸ) ಬಲವಂತವಾಗಿ ಮಕ್ಕಾ ಪ್ರವೇಶಿಸಲು ಸಾಧ್ಯವಲ್ಲ ಎಂದು ಅವರು ಆಣೆ ಹಾಕಿ ಹೇಳುತ್ತಿದ್ದರು. ಬನೂ ಬಕರ್‌ನ ಒಬ್ಬ ವ್ಯಕ್ತಿಯಾದ ಜಮಾಶ್ ಬಿನ್ ಖೈಸ್ ಎಂಬವನು ಕೂಡ ದೊಡ್ಡ ಅಹಂಕಾರದಿಂದ ತಯಾರಾಗಿ ನಿಂತಿದ್ದನು, ಆದರೆ ಮುಹಮ್ಮದ್(ಸ)ರನ್ನು ಎದುರಿಸುವುದು ಸಾಧ್ಯವಿಲ್ಲ ಎಂದು ಅವನ ಪತ್ನಿ ಅವನನ್ನು ಎಚ್ಚರಿಸಿದಳು. ಆದರೂ ಅವನು ಖಂದಮಕ್ಕೆ ಹೋದನು. ಹಝ್ರತ್ ಖಾಲಿದ್ ಬಿನ್ ವಲೀದ್‌ರ ಸೈನ್ಯವು ಅಲ್ಲಿಂದ ಮಕ್ಕಾ ಪ್ರವೇಶಿಸಲು ಬಯಸಿದಾಗ, ಆ ಮುಶ್ರಿಕರು ವಿರೋಧಿಸಿದರು ಮತ್ತು ಯುದ್ಧ ಪ್ರಾರಂಭವಾಯಿತು. ಬನೂ ಬಕರ್‌ನ 20 ಮತ್ತು ಹುಝೈಲ್‌ನ 3 ಅಥವಾ 4 ಜನರು ಕೊಲ್ಲಲ್ಪಟ್ಟರು. ಶತ್ರುಗಳು ಹೀನಾಯವಾಗಿ ಪರಾಜಿತರಾದರು ಮತ್ತು ಎಲ್ಲೆಡೆ ಚದುರಿ ಹೋದರು. ಜಮಾಶ್ ಬಿನ್ ಖೈಸ್ ಕೂಡ ಯುದ್ಧಭೂಮಿಯನ್ನು ಬಿಟ್ಟು ಓಡಿ ಹೋಗಿ ತನ್ನ ಮನೆಯೊಳಗೆ ಹೊಕ್ಕು ಪತ್ನಿಯೊಡನೆ ಬಾಗಿಲು ಮುಚ್ಚುವಂತೆ ಹೇಳಿದನು. ಆತನ ಪತ್ನಿ ವಿಚಾರಿಸಿದಾಗ ಅವನು ಒಂದು ಕವಿತೆಯನ್ನು ಹಾಡಿದನು. ಅವನು ಹಾಡಿದ ಪದ್ಯದ ಅರ್ಥವೇನೆಂದರೆ: "ಅವಳು ಖಂದಮಾದ ಯುದ್ಧವನ್ನು ನೋಡಿದ್ದರೆ, ಸಫ್ವಾನ್, ಇಕ್ರಿಮ ಎಂಬವರು

ಓಡಿಹೋಗಿದ್ದನ್ನು ಮತ್ತು ಖಡ್ಗಗಳು ಅವರ ತಲೆಗಳ ಮೇಲೆ ಬೀಳುತ್ತಿರುವುದನ್ನು ಕಾಣಬಹುದಾಗಿತ್ತು." ಹಝ್ರತ್ ಖಾಲಿದ್‌ರ ಕುದುರೆ ಸವಾರರಲ್ಲಿ ಇಬ್ಬರು ಹುತಾತ್ಮರಾದರು ಎಂದು ಬುಖಾರಿಯಲ್ಲಿ ಉಲ್ಲೇಖವಿದೆ.

ಮಕ್ಕಾದ ಜನರು ಸುರಕ್ಷತೆಯನ್ನು ಪಡೆಯುತ್ತಿದ್ದಾಗ, ಹಝ್ರತ್ ಪೈಗಂಬರ್[ಸ] ತಮ್ಮ ತ್ಯಾಗಶಾಲಿಗಳಾದ ಪ್ರೇಮಿಗಳು, ನಿಷ್ಠಾವಂತ ಸಂಗಡಿಗರನ್ನು ಮರೆತಿರಲಿಲ್ಲ. ಕೆಲವು ವರ್ಷಗಳ ಹಿಂದೆ ಮಕ್ಕಾದ ಅದೇ ಬೀದಿಗಳಲ್ಲಿ ನಡೆದ ದೌರ್ಜನ್ಯ ಮತ್ತು ಹಿಂಸೆಗಳು ಹಝ್ರತ್ ಪೈಗಂಬರ್[ಸ]ರಿಗೆ ಖಂಡಿತವಾಗಿಯೂ ನೆನಪಿಗೆ ಬರುತ್ತಿದ್ದವು. ಹಗ್ಗಗಳಿಂದ ಕಟ್ಟಿ, ಕಲ್ಲಿನ ಬೀದಿಗಳಲ್ಲಿ ಎಳೆಯಲ್ಪಡುತ್ತಿದ್ದ ಹಝ್ರತ್ ಬಿಲಾಲ್ ಕೂಡ ಇಂದು ಅದೇ ವಿಜೇತ ಸೈನ್ಯದಲ್ಲಿ ಸೇರಿದ್ದರು. ಅವರ ಮನಸ್ಸಿನಲ್ಲಿಯೂ ದೌರ್ಜನ್ಯದ ಎಲ್ಲ ದೃಶ್ಯಗಳು ತಾಜಾವಾಗಿರಬಹುದು. ಇದರ ಸೇಡನ್ನು ತೀರಿಸಿಕೊಳ್ಳುವುದು ಸಹ ಅವಶ್ಯಕವೆಂದು ಹಝ್ರತ್ ಪೈಗಂಬರ್[ಸ] ಪರಿಗಣಿಸಿದ್ದರು. ಆದರೆ ಹಝ್ರತ್ ಪೈಗಂಬರ್[ಸ] ಎಷ್ಟು ಸುಂದರವಾಗಿ ಸೇಡು ತೀರಿಸಿಕೊಂಡರು ನೋಡಿರಿ! ಹಝ್ರತ್ ಮುಸ್ಲಿಹ್ ಮೌಊದ್[ರ] ವಿವರಿಸುತ್ತಾರೆ: ಮಕ್ಕಾ ವಿಜಯದ ಸಂದರ್ಭದಲ್ಲಿ ಹಝ್ರತ್ ಬಿಲಾಲ್[ರ]ರ ಸಹೋದರ ಅಬೀ ರುವೈಹಾರಿಗೆ ಹಝ್ರತ್ ಪೈಗಂಬರ್[ಸ] ಧ್ವಜವನ್ನು ನೀಡಿ ಹೀಗೆ ಘೋಷಿಸಿದರು: "ಯಾರು ಈ ಧ್ವಜದ ಕೆಳಗೆ ಬರುತ್ತಾರೋ, ಅವರಿಗೆ ರಕ್ಷಣೆ ನೀಡಲಾಗುವುದು." ಅದಲ್ಲದೇ ಮಕ್ಕಾದ ಬೀದಿಗಳಲ್ಲಿ ಹೋಗಿ ಸ್ವತಃ ಈ ಘೋಷಣೆಯನ್ನು ಮಾಡುವಂತೆ ಹಝ್ರತ್ ಪೈಗಂಬರ್[ಸ] ಬಿಲಾಲ್‌ರಿಗೆ ಆದೇಶಿಸಿದರು. ಈ ಕ್ರಮವು ಆಳವಾದ ಬುದ್ಧಿವಂತಿಕೆ ಮತ್ತು ಉನ್ನತ ಇಸ್ಲಾಮಿನ ನೈತಿಕತೆಯ ಸಂಕೇತವಾಗಿತ್ತು. ಹಝ್ರತ್ ಬಿಲಾಲ್[ರ] ಮಕ್ಕಾದ ಅದೇ ಬೀದಿಗಳಲ್ಲಿ ದೌರ್ಜನ್ಯಕ್ಕೆ ಗುರಿಯಾದ ವ್ಯಕ್ತಿಯಾಗಿದ್ದರು. ಆದರೆ ಹಝ್ರತ್ ಪೈಗಂಬರ್[ಸ] ಸೇಡನ್ನು ಖಡ್ಗದಿಂದ ತೆಗೆದುಕೊಳ್ಳಲಿಲ್ಲ, ಬದಲಿಗೆ ಹಝ್ರತ್ ಬಿಲಾಲ್‌ರನ್ನು ಶಾಂತಿಯ ಘೋಷಣೆಯ ಪ್ರತಿನಿಧಿಯನ್ನಾಗಿ ಮಾಡಿದರು. ಈ ಕಾರ್ಯದಿಂದ ಹಝ್ರತ್ ಬಿಲಾಲ್‌ರ ಹೃದಯದಲ್ಲಿದ್ದ ಸೇಡಿನ ಬೆಂಕಿಯು ಪ್ರೀತಿ ಮತ್ತು ಘನತೆಯಾಗಿ ಬದಲಾಯಿತು. ಹಿಂದೊಮ್ಮೆ ತಾನು ಗುಲಾಮನಾಗಿ ಅವಮಾನಕ್ಕೆ ಒಳಗಾಗುತ್ತಿದ್ದರೂ, ಇಂದು ಅದೇ ಜನರಿಗೆ ತಾನು ಶಾಂತಿಯ ಆಶ್ರಯವನ್ನು ನೀಡುತ್ತಿದ್ದೇನೆ ಎಂದು ಹಝ್ರತ್ ಬಿಲಾಲ್[ರ] ಆ ಕ್ಷಣದಲ್ಲಿ ಭಾವಿಸುತ್ತಿರಬಹುದು. ಈ ಪ್ರತೀಕಾರವು ಹಝ್ರತ್ ಯೂಸುಫ್[ಅ]ರ ಪ್ರತೀಕಾರಕ್ಕಿಂತಲೂ ದೊಡ್ಡದಾಗಿತ್ತು. ಏಕೆಂದರೆ ಹಝ್ರತ್ ಯೂಸುಫ್[ಅ] ತಮ್ಮ ಸ್ವಂತ ಸಹೋದರರನ್ನು ಕ್ಷಮಿಸಿದ್ದರು, ಆದರೆ ಹಝ್ರತ್ ಪೈಗಂಬರ್[ಸ] ತಮ್ಮ ಸಮುದಾಯವನ್ನು ಒಬ್ಬ ಗುಲಾಮನ ಮೂಲಕ ಕ್ಷಮಿಸಿದರು. ಈ ಕಾರ್ಯವು ಇಸ್ಲಾಮಿನ ನ್ಯಾಯ ಮತ್ತು ದಯೆಯ ಉನ್ನತ ಉದಾಹರಣೆ ಮಾತ್ರವಾಗಿರಲಿಲ್ಲ, ಹಝ್ರತ್ ಬಿಲಾಲ್‌ರಂತಹ ದುರ್ಬಲ ಮತ್ತು ಪೀಡಿತ ವ್ಯಕ್ತಿಗೆ ಮಹತ್ತಾದ ಗೌರವವನ್ನು ನೀಡಿತು, ಇದು ಲೋಕದ ಚರಿತ್ರೆಯಲ್ಲಿ ಸದಾ ನೆನಪಿನಲ್ಲಿ ಇರುವುದು.

ಒಟ್ಟಿನಲ್ಲಿ ಇದು ನಮ್ಮ ನೇತಾರ ಹಝ್ರತ್ ಪೈಗಂಬರ್[ಸ]ರ ಪ್ರತೀಕಾರದ ಮಾದರಿಯಾಗಿದೆ. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್**. ಇದು ಮಕ್ಕಾ ಪ್ರವೇಶದ ಆರಂಭಿಕ ವಿವರಣೆಯಾಗಿದೆ, ಈ ವಿಷಯ ಮುಂದುವರಿಯುವುದು. ಇನ್‌ಶಾ ಅಲ್ಲಾಹ್.

(ಖುತ್ಬದ ಕೊನೆಯಲ್ಲಿ ಹುಝೂರ್ ಒಬ್ಬ ದಿವಂಗತರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ನಮಾಝ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***[atba]

At, ***'Masjid Mubarak'***, *Islamabad, Tilford*, U.K. On 27-06-2025

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim | ***Layout**:* Basheer K.P. Manjeshwar

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon